ವಿದಾಯ

# ಪ್ರಾಣ ಇರುವವರೆಗೆ..



ಈಶ್ವರ ಬಡಿಗೇರ




ಸತತ 50 ವರ್ಷಗಳ ಕಾಲ ಕಾರ್ಟೂನ್ ಪಾತ್ರಗಳ ಮೂಲಕ ಭಾರತೀಯ ಓದುಗರನ್ನು ರಂಜಿಸಿದ, ಕೆಣಕಿದ, ನಗಿಸಿದ ಪ್ರಾಣ್ ಕುಮಾರ್ ಶರ್ಮಾ, ಕೊನೆಗೂ ಕಾರ್ಟೂನ್ ಬಿಡಿಸುತ್ತಲೇ ಕಣ್ಮರೆಯಾಗಿದ್ದಾರೆ. ಹಿಂದಿ, ಕನ್ನಡ ಸಹಿತ ಹಲವಾರು ಭಾರತೀಯ ಭಾಷೆಗಳಲ್ಲಿ ಜನಪ್ರಿಯವಾದ ಹತ್ತಾರು ಕಾರ್ಟೂನ್ ಪಾತ್ರಗಳು ಪ್ರಾಣ್ ಅವರನ್ನು ಅಜರಾಮರವಾಗಿಸಿವೆ.

ಚಾಚಾ ಚೌಧುರಿ, ಡಾಬೂ, ಶ್ರೀಮತಿ, ರಾಮನ್, ಪಿಂಕಿ, ಬಿಲ್ಲೂ– ಮುಂತಾಗಿ ಅವರು ಸೃಷ್ಟಿಸಿದ ಪಾತ್ರಗಳು ನಿಜಜೀವನದ ಪಾತ್ರಗಳೆಂಬಂತೆಯೇ ಜನಪ್ರಿಯವಾಗಿವೆ. 'ಸುಧಾ' ಮತ್ತು 'ಪ್ರಜಾವಾಣಿ'ಯಲ್ಲಿ ಈಗಲೂ ಬರುತ್ತಿರುವ ಶ್ರೀಮತಿ ಮತ್ತು ರಾಮನ್ ಕಾರ್ಟೂನ್‌ಗಳಿಗೆ ಬಹುದೊಡ್ಡ ಅಭಿಮಾನಿ ಬಳಗವಿದೆ. '80 ದಶಕದಲ್ಲಿ ಸುಧಾ ದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಡಾಬೂ ಸರಣಿಯನ್ನು ಮತ್ತೆ ಆರಂಭಿಸಿ' ಎಂದು ಹಲವು ಓದುಗರು ಸುಧಾ ಕಚೇರಿಗೆ ಇತ್ತೀಚೆಗೆ ಕರೆ ಮಾಡಿ ಒತ್ತಾಯಿಸಿದ್ದರು ಎಂದರೆ, ಪ್ರಾಣ್ ಅವರ ಕಾರ್ಟೂನ್ ಸರಣಿಯ ಜನಪ್ರಿಯತೆಯನ್ನು ಅರಿಯಬಹುದು.

ಪ್ರಾಣ್ ಕುಮಾರ್ ಶರ್ಮಾ 1938ರಲ್ಲಿ ಈಗಿನ ಪಾಕಿಸ್ತಾನದ ಪೂರ್ವ ಗಡಿಯ ಕಸೂರ್ ಎಂಬ ಪಟ್ಟಣದಲ್ಲಿ ಜನಿಸಿದವರು. ದೆಹಲಿಗೆ ಬಂದ ಬಳಿಕ, 1969ರಲ್ಲಿ 'ಲಾಟ್‌ಪಾಟ್' ಹಿಂದೀ ಮ್ಯಾಗಸಿನ್‌ನಲ್ಲಿ ಅವರು ಮೊದಲು ಬಿಡಿಸಿದ್ದು 'ಚಾಚಾ ಚೌಧುರಿ' ಯನ್ನು. ಇವತ್ತಿಗೂ ಚಾಚಾ ಚೌಧುರಿಯ ಜನಪ್ರಿಯತೆ ಅಬಾಧಿತ. ಇತ್ತೀಚೆಗೆ ಸಹಾರಾ ಟೀವಿ ಚಾನೆಲ್‌ನಲ್ಲಿ ಸೀರಿಯಲ್ ಆಗಿಯೂ ಬಂತು. ಬಾಲಿವುಡ್‌ನ ಜನಪ್ರಿಯ ಹಾಸ್ಯನಟ ರಘುವೀರ್ ಯಾದವ್ ಅವರೇ ಚಾಚಾ ಚೌಧುರಿಯ ಪಾತ್ರವನ್ನು ನಿರ್ವಹಿಸಿದ್ದರು.

70ರ ದಶಕದಲ್ಲಿ ಭಾರತೀಯ ಕಾರ್ಟೂನ್ ಪಾತ್ರಗಳಿರಲಿಲ್ಲ. ಪ್ಯಾಂಟಮ್ ಮತ್ತು ಸೂಪರ್‌ಮ್ಯಾನ್ ಮುಂತಾದ ಪಾಶ್ಚಾತ್ಯ ಕಾರ್ಟೂನ್‌ಗಳನ್ನೇ ಭಾರತೀಯ ಭಾಷೆಗಳಿಗೆ ಅನುವಾದಿಸಲಾಗುತ್ತಿತ್ತು. ಆ ಸಂದರ್ಭದಲ್ಲಿ 'ಚಾಚಾ ಚೌಧುರಿ'ಯನ್ನು ಆರಂಭಿಸಿದ ಪ್ರಾಣ್‌ಜೀ, ದಿನನಿತ್ಯದ ಬದುಕಿನ ಘಟನೆಗಳನ್ನೇ ಕಥೆ ಮಾಡಿದರು. ಏಕಕಾಲದಲ್ಲಿ ಮಕ್ಕಳಿಗೂ, ದೊಡ್ಡವರಿಗೂ ಇಷ್ಟವಾದ ಚಾಚಾ ಚೌಧುರಿ, ಪ್ರಾಣ್ ಅವರಿಗೂ ಅಪಾರ ಯಶಸ್ಸು ತಂದುಕೊಟ್ಟಿತು.



ಪ್ರಾಣ್ ಅವರ ಕಾರ್ಟೂನ್ ಪಾತ್ರಗಳು ಸೂಪರ್‌ಮ್ಯಾನ್ ಗುಣಗಳನ್ನು ಹೊಂದಿರಲಿಲ್ಲ ಎನ್ನುವುದು ವಿಶೇಷ. ಅವು ಜನಸಾಮಾನ್ಯರಂತೆಯೇ ವರ್ತಿಸುತ್ತಿದ್ದವು. ನಗು ಉಕ್ಕಿಸುವುದರ ಜತೆಗೆ ಓದುಗರನ್ನು ವಿಚಾರಕ್ಕೂ ಹಚ್ಚುತ್ತಿದ್ದವು. ಭಾರತದಲ್ಲಿ ಕಾರ್ಟೂನ್‌ಗಳಿಗೂ ವಾಣಿಜ್ಯ ಮೌಲ್ಯ ಇದೆ ಎಂದು ಸಾಧಿಸಿ ತೋರಿಸಿದವರು ಪ್ರಾಣ್. ಅವರ ಪ್ರಾಣ್ ಫೀಚರ್ಸ್ ಇವತ್ತು ಭಾರತದಾದ್ಯಂತ ವಿವಿಧ ಭಾಷೆಗಳ ಮ್ಯಾಗಸಿನ್ ಮತ್ತು ಪತ್ರಿಕೆಗಳಿಗೆ ಸಾವಿರಾರು ಕಾರ್ಟೂನ್‌ಗಳನ್ನು ಒದಗಿಸುವ ಸಂಸ್ಥೆಯಾಗಿ ಬೆಳೆದಿದೆ.

'ಸುಧಾ' ಕಚೇರಿಗೆ ತಿಂಗಳು– ಎರಡು ತಿಂಗಳಿಗೆ ಒಮ್ಮೆಯಾದರೂ ಅವರ ದೂರವಾಣಿ ಕರೆ ಬರುತ್ತಿತ್ತು. ಗಡಸು ಧ್ವನಿಯ ಹಿರಿಯ ಜೀವದ ಮೃದು ಹಿಂದಿ ಕೇಳಲು ಹಿತವಾಗಿತ್ತು. ಕಳೆದ ಒಂದು ವರ್ಷದಿಂದ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಅವರು, ಇತ್ತೀಚೆಗೆ ಆಸ್ಪತ್ರೆ ಸೇರಿದ್ದಾಗಲೂ ಕಾರ್ಟೂನ್ ಬಿಡಿಸುವ ಕೆಲಸ ಕೈಬಿಟ್ಟಿರಲಿಲ್ಲ. ಅವರ ಸಾಧನೆಯನ್ನು ಮೆಚ್ಚಿ ಹತ್ತಾರು ಪ್ರಶಸ್ತಿಗಳೂ ಸಂದಿವೆ. 1995ರಲ್ಲಿ ಲಿಮ್ಕಾ ದಾಖಲೆ ಪುಸ್ತಕದಲ್ಲಿ ದಾಖಲಾದ ಅವರು, 2001ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್‌ನಿಂದ 'ಜೀವಮಾನದ ಸಾಧನೆಯ ಪ್ರಶಸ್ತಿ' ಪಡೆದುಕೊಂಡರು. 2014ರಲ್ಲಿ 'ವರ್ಲ್ಡ್ ಎನ್‌ಸೈಕ್ಲೊಪೀಡಿಯಾ ಆಫ್ ಕಾಮಿಕ್ಸ್' ಸಂಸ್ಥೆ ಅವರನ್ನು 'ಭಾರತದ ವಾಲ್ಟ್ ಡಿಸ್ನಿ' ಎಂಬ ಬಿರುದು ನೀಡಿ ಗೌರವಿಸಿತ್ತು.

'ಕಾಮಿಕ್ಸ್'ಗಳನ್ನು ನಿಲ್ಲಿಸಿದ ದಿನ ನನ್ನ ಉಸಿರೂ ನಿಂತುಹೋಗುತ್ತದೆ. ಕೊನೆಯುಸಿರು ಇರುವವರೆಗೂ ಕಾರ್ಟೂನ್ ಬಿಡಿಸುತ್ತೇನೆ. ಮಕ್ಕಳ ಮುಖದಲ್ಲಿ ನಗು ಮೂಡಿಸುತ್ತೇನೆ ಎನ್ನುವುದು ನನಗೆ ಅತ್ಯಂತ ಹೆಚ್ಚು ಸಂತೋಷ ಕೊಡುವ ವಿಚಾರ' ಎಂದು ಅವರು ಸಂದರ್ಶನವೊಂದರಲ್ಲಿ ಹೇಳಿದ್ದರು. ಅವರು ನುಡಿದಂತೆಯೇ ನಡೆದಿದೆ.

■ ಬಿ.ಎಂ.ಹನೀಫ್